# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 181 | Pages. 2 | Date: 27-06-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 181 – ಪುಟಗಳು : 2 | 27-06-2026 ಶನಿವಾರ | Ph: 8762954248 | ದರ : ₹1


# ತನಿಖಾ ವರದಿ ಶೀಘ್ರ ದೆಹಲಿ ವರಿಷ್ಠರಿಗೆ

## ಅಡ್ಡ ಮತದಾನ ಕುರಿತು ವಿಜಯೇಂದ್ರ ಪ್ರತಿಕ್ರಿಯೆ । ಶೀಘ್ರ ವರದಿ ಸಲ್ಲಿಸುವೆ ಎಂದ ಸಿ.ಟಿ.ರವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಆಗಿರುವ ಅಡ್ಡ ಮತದಾನದ ವರದಿ ಕುರಿತು ರಚಿಸಿದ್ದ ಸಮಿತಿ ವರದಿ ಪೂರ್ಣಗೊಂಡಿದ್ದು ಶೀಘ್ರದಲ್ಲೇ ದೆಹಲಿಗೆ ಕಳುಹಿಸಿಕೊಡುತ್ತೇನೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೇಳಿದರು.

ಖಾಸಗಿ ಕಾರ್ಯಕ್ರಮ ನಿಮಿತ್ತ ಶುಕ್ರವಾರ ಆಲೂರಿಗೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಆ ಬಗ್ಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ನೇತೃತ್ವದ ತಂಡ ತನಿಖಾ ವರದಿ ಸಿದ್ದಪಡಿಸಿದೆ. ರವಿ ಅವರ ಜೊತೆ ಪೂರ್ಣ ವಿಚಾರ ಮಾತನಾಡಲು ಆಗಿಲ್ಲ. ಅವರು ವರದಿ ಕೊಟ್ಟ ಬಳಿಕ ದೆಹಲಿಗೆ ಕಳಿಸಿಕೊಡ್ತೇನೆ ಎಂದು ಹೇಳಿದರು.

ಸಿ.ಟಿ.ರವಿ ವರದಿ ನೀಡುವ ಸಂಬಂಧ ನನ್ನ ಸಮಯ ಕೇಳಿದ್ದಾರೆ. ನಾನು ನಾಳೆ ಮತ್ತು ನಾಡಿದ್ದು ತಿರುಪತಿಗೆ ಹೊರಟಿದ್ದೇನೆ. ಬಂದ ಬಳಿಕ ಸಿಗುವುದಾಗಿ ಹೇಳಿದ್ದೇನೆ. ಅವರೊದಿಗೆ ಪೂರ್ಣ ವಿಚಾರ ಮಾತನಾಡಲು ಆಗಿಲ್ಲ ಎಂದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸುವ ವಿಚಾರ ಮಾತನಾಡಿದ ಅವರು, ತಮಿಳುನಾಡಿನ ರೈತರ ಹಿತಾಸಕ್ತಿ ಕಾಯುವ ಮೊದಲು ಕಾವೇರಿ ಕೊಳ್ಳದ ರೈತರ ರಕ್ಷಣೆಗೆ ಮುಂದಾಗುವುದು ಸರ್ಕಾರದ ಕರ್ತವ್ಯ. ಈಗ ಬರಗಾಲದ ಸೂಚನೆ ಸ್ಪಷ್ಟವಾಗಿ ಗೋಚರ ಆಗಿದೆ.

ಇಂತಹ ಸಂದರ್ಭದಲ್ಲಿ ನಮ್ಮ ರೈತರಿಗೆ ಕೊಡಲು ನೀರಿಲ್ಲ. ಹಾಗಾಗಿ ಸರಿಯಾಗಿ ವಾದ ಮಾಡಿ ನಮ್ಮ ರೈತರ ರಕ್ಷಣೆ ಮಾಡುವ ಕೆಲಸ ಸರ್ಕಾರ ಮಾಡುತ್ತದೆ ಎನ್ನುವ ಅಪೇಕ್ಷೆಯಲ್ಲಿ ರೈತರು ಇದ್ದಾರೆ. ಕಾದು ನೋಡೋಣ ಎಂದರು.

ರಾಜ್ಯದಲ್ಲಿ ಸಚಿವ ಸ್ಥಾನಕ್ಕಾಗಿ ಪ್ರತಿಭಟನೆ ದೆಹಲಿ ಯಾತ್ರೆ ವಿಚಾರ ಪ್ರತಿಕ್ರಿಯಿಸಿ ಸಚಿವ ಸಂಪುಟ ವಿಸ್ತರಣೆ



ಸಂಪೂರ್ಣವಾಗಿ ಆಗಬೇಕಿದೆ. ಈಗಾಗಲೇ ನಾವು ಒತ್ತಾಯ ಮಾಡಿದ್ದೇವೆ. ಬರಗಾಲದ ಮುನ್ಸೂಚನೆ ಹಿನ್ನೆಲೆಯಲ್ಲಿ ಗೊಬ್ಬರ ಕೊರತೆ ಆಗದಂತೆ, ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆ ಆಗದಂತೆ ಕ್ರಮ ವಹಿಸಿ ಎಂದು ಎಚ್ಚರಿಸಿದ್ದೇವೆ. ಸಿಎಂ ಅವರು ಸಚಿವರಿಗೆ ಜವಾಬ್ದಾರಿ ಕೊಟ್ಟಿದ್ದಾರೆ. ಆದರೆ ದುರಂತ ಎಂದರೆ ಸಚಿವರು ತಮ್ಮ ಖಾತೆಗಳ ಅಸಮಾಧಾನ ಇನ್ನೂ ಹೊಂದಿದ್ದಾರೆ. ಇದೆಲ್ಲವನ್ನೂ ಬದಿಗಿಟ್ಟು ರೈತರ ಸಂಕಷ್ಟಕ್ಕೆ ಸ್ಪಂದಿಸಲಿ ಎಂದರು.

ಬಿಡದಿ ಟೌನ್ ಶಿಪ್ ಹೋರಾಟ ವಿಚಾರವಾಗಿ ವಿಪಕ್ಷ ನಾಯಕರಾದ ಅಶೋಕ್ ಜತೆ ಚರ್ಚೆ ಮಾಡಿದ್ದೇನೆ. ನಮ್ಮ ಹೋರಾಟ ಹೇಗಿರಬೇಕು ಎಂದು ಇನ್ನೆರಡು ದಿನದಲ್ಲಿ ತೀರ್ಮಾನ ಮಾಡುತ್ತೇವೆ. ಗೃಹಲಕ್ಷ್ಮೀ ಹಣ ನೀಡಿ ಕೆಯಲ್ಲಿ ನೂರಾರು ಕೋಟಿ ಹೊಡೆಯುವ ಕೆಲಸ ಆಗುತ್ತಿದೆ. ಗ್ಯಾರಂಟಿ ಸಮಿತಿ ಅಧ್ಯಕ್ಷರಿದ್ದರೂ ಫಲಾನುಭವಿಗಳಿಗೆ

> ಸಚಿವ ಪ್ರಿಯಾಂಕ್ ಖರ್ಗೆ ಮೂರು ವರ್ಷಗಳಲ್ಲಿ ಆರ್‌ಡಿಪಿಆರ್, ಐಟಿ, ಬಿಟಿ ಸಚಿವರಾಗಿ ಒಂದು ದಿನವೂ ಕೂಡ ತನ್ನ ಇಲಾಖೆಯಲ್ಲಿ ಮಾಡಿರುವ ಘನ ಕಾರ್ಯದ ಬಗ್ಗೆ ಮಾತನಾಡಲಿಲ್ಲ, ತನ್ನ ಸಾಧನೆ ಬಗ್ಗೆ ಮಾತನಾಡಲಿಲ್ಲ, ಬೆಳಿಗ್ಗೆಯಿಂದ ಸಂಜೆ ವರೆಗೂ ಆರ್‌ಎಸ್ ಎಸ್ ಎಂದು ಬಾಯಿ ಬಡಿದುಕೊಳ್ಳುವುದನ್ನು ಬಿಟ್ಟರೆ ಇನ್ನೇನು ಮಾಡಿಲ್ಲ.
>
> **– ಪ್ರತಾಪ್ ಸಿಂಹ, ಮಾಜಿ ಸಂಸದ**

ಹಣ ಸರಿಯಾಗಿ ತಲುಪಲಿಲ್ಲ. ಇದು ಸರ್ಕಾರದ ವೈಫಲ್ಯ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಅಯೋಧ್ಯೆ ರಾಮಮಂದಿರದಲ್ಲಿ ಹಣ ದುರುಪಯೋಗವಾಗಿದೆ ಎಂಬ ಕಾಂಗ್ರೆಸ್ ನಾಯಕರ ಆರೋಪ ವಿಚಾರಕ್ಕೆ ಪ್ರತಿಕ್ರಿಯಿಸಿ ಮಾಡಲು ಬೇಕಾದಷ್ಟು ಕೆಲಸವಿದೆ, ಅದನ್ನು ಮಾಡಲು ಹೇಳಿ ಎಂದರು.

### ಮುಂದಿನ ಮುಖ್ಯಮಂತ್ರಿ ವಿಜಯೇಂದ್ರ: ಘೋಷಣೆ

ಮದುವೆ ಸಮಾರಂಭ ಹಿನ್ನೆಲೆಯಲ್ಲಿ ಆಲೂರಿಗೆ ಬಂದಿದ್ದ ಬಿ.ವೈ. ವಿಜಯೇಂದ್ರ ಅವರಿಗೆ ಬಿಜೆಪಿ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.

ಪಟಾಕಿ ಸಿಡಿಸಿ, ಕ್ರೇನ್ ಮೂಲಕ ಹೂಮಳೆಗೈದು ಬೃಹತ್ ಹಾರ ಹಾಕಿ ಸ್ವಾಗತ ಕೋರಿದರು.

ಮುಂದಿನ ಮುಖ್ಯಮಂತ್ರಿ ರಾಜಾಹುಲಿ ಎಂದು ಬಿಜೆಪಿ ಕಾರ್ಯಕರ್ತರು ಜೈಕಾರ ಕೂಗಿದರು.

ಮಾಜಿ ಸಚಿವ ಸಿ.ಟಿ.ರವಿ, ಸಿಮೆಂಟ್‌ಮಂಜು, ಎಚ್.ಕೆ.ಸುರೇಶ್ ಹಾಗೂ ಪ್ರೀತಂಗೌಡ, ಸಿದ್ದೇಶ್ ನಾಗೇಂದ್ರ ಇತರರಿದ್ದರು. ಸಕಲೇಶಪುರದ ಕೆಂಪೇಗೌಡ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

### ಶೀಘ್ರ ವರದಿ ಸಲ್ಲಿಸುವೆ

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಅಡ್ಡ ಮತದಾನ ನಡೆದಿರುವ ಬಗ್ಗೆ ಶೀಘ್ರವೇ ರಾಜ್ಯಾಧ್ಯಕ್ಷರನ್ನು ಭೇಟಿಯಾಗಿ ವರದಿ ನೀಡುವೆ ಎಂದು ಹೇಳಿದರು.

ನಾನು ರಾಜ್ಯಾಧ್ಯಕ್ಷರನ್ನು ಇನ್ನೂ ಭೇಟಿ ಅಗಿಲ್ಲ. ಅವರು ಇರಲಿಲ್ಲ, ಭೇಟಿ ಆದ ಮೇಲೆ ಕೊಡ್ತೀವಿ ಎಂದರು.

ಆರ್‌ಎಸ್‌ಎಸ್ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಟೀಕೆಗೆ ವಾಗ್ದಾಳಿ ನಡೆಸಿದ ರವಿ, ಅವರು ಸಂಜಯ್‌ಗಾಂಧಿ ಬ್ರಿಗೇಡ್‌ನಲ್ಲಿದ್ದವರು. ತುರ್ತು ಪರಿಸ್ಥಿತಿ ವೇಳೆ ಅದು ಏನು ಮಾಡಿದೆ ಗೊತ್ತಿದೆ ಎಂದು ಟೀಕಿಸಿದರು.

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಡಿ.ಕೆ. ಶಿವಕುಮಾರ್ ಅವರು ನಾಗಮಂಗಲದಲ್ಲಿ ವಿಮಾನ ನಿಲ್ದಾಣ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದಾರೆ. ಖಂಡಿತ ಸ್ವಾಗತಾರ್ಹ. ಏರ್‌ಪೋರ್ಟ್ ಮಾಡಿದ ಮೇಲೆ ಸಹಜವಾಗಿ ಅಭಿವೃದ್ಧಿ ಆಗುತ್ತೆ. ಕೈಗಾರಿಕೆ ತೆರೆಯಬೇಕಾ, ರಾಮನಗರ ಭಾಗದಲ್ಲಿ ಎಲ್ಲಿ ಸರ್ಕಾರಿ ಭೂಮಿ, ಬಂಜರು ಭೂಮಿ ಇದೆ ಅಲ್ಲಿ ಮಾಡಿ,

ರಿಯಲ್ ಎಸ್ಟೇಟ್‌ನವರು ಮಾಡುವ ಕೆಲಸವನ್ನು ನೀವು ಮಾಡಬೇಕಾದ ಅಗತ್ಯವಿಲ್ಲ ಎಂದರು.

ರೈತರು ಸ್ವಇಚ್ಛೆಯಿಂದ ಭೂ ಕೊಟ್ಟರೆ ಓಕೆ. ನೀವು ಕಿತ್ತುಕೊಳ್ಳುವುದು ಸರಿಯಲ್ಲ. ಕುಮಾರಣ್ಣ ಅವರು ಭೈರಹೊಂಗಲಕ್ಕೆ ಬನ್ನಿ ಅಲ್ಲೇ ತೀರ್ಮಾನ ಆಗಲಿ ಎಂದಿದ್ದಾರೆ. ನೀವು ತುಂಬಾ ಚೆನ್ನಾಗಿ ರೈತರ ಮೊನವೊಲಿಸಿದರೆ ಅವರು ನಿಮ್ಮ ಪರ ಇರ್ತಾರೆ. ರೈತರ ಜೊತೆ ಚರ್ಚೆ ಮಾಡಲು ಏನು ಸಮಸ್ಯೆ ಎಂದು ಪ್ರಶ್ನಿಸಿದರು.

ವಿಧಾನಸೌಧದಲ್ಲೇ ಏಕೆ ಚರ್ಚೆ ಮಾಡುವ ಅಗತ್ಯತೆ ಏನಿದೆ, ಅದೇ ರೈತರು ನಿಮ್ಮನ್ನು 1989 ರಿಂದ ಸತತವಾಗಿ ಗೆಲ್ಲಿಸುತ್ತಾ ಬಂದಿದ್ದಾರೆ. ಆ ರೈತನ ಬಳಿ ಹೋಗಿ ಏನು ಸಮಸ್ಯೆ ಇದೆ ಎಂದು ಏಕೆ ಕೇಳುತ್ತಿಲ್ಲ ಎಂದರು.

ಕುಮಾರಣ್ಣ ಕರೆದಿದ್ದಾರಲ್ಲಾ ನೀವು ಅವರು ಇಬ್ಬರೂ ಕುಳಿತುಕೊಂಡು ರೈತರನ್ನು ಕೇಳಿ, ರೈತರು ಇಚ್ಛೆ ಇದ್ದರೆ ಕೊಡ್ತಾರೆ ಇಲ್ಲಾ ಅಂದರೆ ಕೈಬಿಡಿ ಎಂದರು.

ಅದನ್ನು ಬಿಟ್ಟು ನಾನು ಮಾಡೇ ತೀರುತ್ತೇನೆ ಎಂದು ಹೇಳಲು ಇದೇನು ಸರ್ವಾಧಿಕಾರ ಅಲ್ಲ, ಇಂದಿರಾಗಾಂಧಿ ಸತ್ತು ಹೋಗಿ ಬಹಳ ವರ್ಷ ಆಯ್ತು, ನೀವು ಆ ಸರ್ವಾಧಿಕಾರಿ ಧೋರಣೆ ತೋರಬೇಡಿ ಎಂದು ಟಾಂಗ್ ನೀಡಿದರು.

ನಾನು ಅಭಿವೃದ್ಧಿಯ ವಿರೋಧಿ ಅಲ್ಲಾ, ವಿರೋಧದ ನಡುವೆಯೂ ಬೆಂಗಳೂರು-ಮಂಗಳೂರು ಹೆದ್ದಾರಿ ಮಾಡಿದ್ದೇನೆ, ರೈತರ ಇಚ್ಛೆಗೆ ವಿರುದ್ಧವಾಗಿ ಜಮೀನನ್ನು ಕಿತ್ತುಕೊಳ್ಳುವುದು ತಪ್ಪು ಎಂದರು.

## ಅಕ್ರಮ ಭೂ ಮಂಜೂರು: ನಿಷ್ಪಕ್ಷಪಾತ ತನಿಖೆಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಗರ್ ಹುಕುಂ ಯೋಜನೆಯಡಿ ಅಕ್ರಮ ಭೂಮಂಜೂರಾತಿ ಪ್ರಕರಣ ಸಂಬಂಧ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ರಾಜಕೀಯವಾಗಿ ಕೆ.ಎಸ್.ಲಿಂಗೇಶ್ ವಿರುದ್ಧ ದ್ವೇಷ ಸಾಧಿಸುವ ಕೆಲಸ ಆಗಬಾರದು ಎಂದು ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಎನ್.ಪರಮೇಶ್ ಆಗ್ರಹಿಸಿದರು.





ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಲಿಂಗೇಶ್ ಅವರು ನಿಜವಾಗಿಯೂ ತಪ್ಪು ಮಾಡಿದ್ದಾರೆಯೇ ಅಥವಾ ಬೇಜವಾಬ್ದಾರಿತನ ಹಾಗು ಆಡಳಿತಾತ್ಮಕ ಲೋಪಗಳಿಂದ ಪ್ರಕರಣದಲ್ಲಿ ಸಿಲುಕಿದ್ದಾರೆಯೇ ಎಂಬುದು ತನಿಖೆಯಿಂದಲೇ ಸ್ಪಷ್ಟವಾಗಬೇಕು. ಸರಳ, ಸಜ್ಜನ ವ್ಯಕ್ತಿತ್ವದ ಲಿಂಗೇಶ್ ಅವರನ್ನು ಏಕಾಏಕಿ ಬಂಧಿಸಿರುವುದು ಕ್ಷೇತ್ರದ ಜನರು, ಲಿಂಗಾಯತ ಸಮುದಾಯ ಹಾಗು ಕುಟುಂಬಸ್ಥರಿಗೆ ಆಘಾತವುಂಟು ಮಾಡಿದೆ. ಬಗರ್ ಹುಕುಂ ಸಮಿತಿ ಅಧ್ಯಕ್ಷರಾಗಿದ್ದಾಗ ಏನಾಗಿದೆ ಎಂಬುದರ ಕುರಿತು ತನಿಖೆ ನಂತರವೇ ಬಹಿರಂಗವಾಗಬೇಕು ಎಂದರು.

ಆಗಿನ ಅಧಿಕಾರಿಗಳು ಅಥವಾ ಸಮಿತಿಯಲ್ಲಿದ್ದವರ ಲೋಪದೋಷದಿಂದ ಲಿಂಗೇಶ್ ಅವರು ಪ್ರಕರಣದಲ್ಲಿ ಸಿಲುಕಿರುವ ಅನುಮಾನವಿದೆ. ಬಗರ್ ಹುಕುಂ ಸಮಿತಿ ಅಧ್ಯಕ್ಷರಾಗಿ ಸಾರ್ವಜನಿಕರ ಪರವಾಗಿ ಕೆಲಸ ಮಾಡಿದ್ದರು. ಅವರಿಗೆ ನ್ಯಾಯ ಸಿಗಬೇಕೆಂದು ಪ್ರತಿಪಾದಿಸಿದರು.

ಜೆಡಿಎಸ್ ಪಕ್ಷದಲ್ಲಿ ಲಿಂಗೇಶ್ ಅವರು ನಿಷ್ಠಾವಂತ ಕಾರ್ಯಕರ್ತರಾಗಿ ಕೆಲಸ ಮಾಡಿದ್ದರು. ಇಂತಹ ಸಂದರ್ಭದಲ್ಲಿ ಪಕ್ಷದ ನಾಯಕರು ಅಥವಾ ಕಾರ್ಯಕರ್ತರು ಈ ವಿಚಾರವಾಗಿ ಸ್ಪಷ್ಟವಾಗಿ ಮಾತನಾಡದೇ ಇರುವುದು ಹಲವು ಪ್ರಶ್ನೆ ಹುಟ್ಟಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಯಾವುದೇ ರಾಜಕೀಯ ಷಡ್ಯಂತ್ರಕ್ಕೂ ಅವರು ಬಲಿಯಾಗಬಾರದು. ಈ ಸಂಕಷ್ಟದ ಸಮಯದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ಅವರ ಕುಟುಂಬದೊಂದಿಗೆ ನಿಲ್ಲಲಿದೆ ಎಂದು ಭರವಸೆ ನೀಡಿದರು.

ಪ್ರಕರಣದ ಬಗ್ಗೆ ಹಲವು ಅನುಮಾನವಿದ್ದು, ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಸತ್ಯಾಂಶ ಹೊರಬಂದು ಲಿಂಗೇಶ್ ಅವರಿಗೆ ನ್ಯಾಯ ದೊರಕಲಿ ಎಂದು ಆಗ್ರಹಿಸಿದರು.


ಸುದ್ದಿಗೋಷ್ಠಿಯಲ್ಲಿ ಯತೀಶ್, ಜಯಶಂಕರ್, ಗೀತಾಸ್ವಾಮಿ, ಯೋಗೀಶ್, ಶಿವಣ್ಣ ಇದ್ದರು.

## ಶಾಹಿ ಕಂಪನಿಯಿಂದ ಶಾಲಾ ಕಾಲೇಜಿಗೆ ಪರಿಕರ: ಮೆಚ್ಚುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಹಾಸನದ ಶಾಹಿ ಸಂಸ್ಥೆ ಪ್ರತಿವರ್ಷದ ಸಿಎಸ್ ಆರ್ ಅನುದಾನದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರ ಹಾಗೂ ಶಾಲಾ ಕಾಲೇಜುಗಳಿಗೆ ಅಗತ್ಯ ಪರಿಕರ ಹಾಗೂ ಯಂತ್ರೋಪಕರಗಳನ್ನು ವಿತರಣೆ ಮಾಡುತ್ತಿರುವುದು ಸಮಾಜಮುಖಿ ಕಾರ್ಯವಾಗಿದೆ ಎಂದು ಶಾಸಕ ಎ.ಮಂಜು ತಿಳಿಸಿದರು.

ತಾಲೂಕಿನ ದೊಡ್ಡಮಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಅರಕಲಗೂಡಿನ ಸಾರ್ವಜನಿಕ ಆಸ್ಪತ್ರೆಗೆ ಡಯಾಲಿಸಿಸ್ ಯಂತ್ರ ಕೊಡುಗೆ ನೀಡಿದ್ದರು. ಅದರ ಹಿಂದಿನ ವರ್ಷ ಸಂತೆಮರೂರು ಪ್ರಾಥಮಿಕ ಶಾಲೆಗೆ ಹೈಟೆಕ್ ಲ್ಯಾಬ್ ಕೊಡುಗೆಯಾಗಿ ಇದೇ ಸಂಸ್ಥೆ ನೀಡಿದೆ. ಈ ಸಾಲಿನಲ್ಲಿ





ದೊಡ್ಡಮಗ್ಗೆ ಮತ್ತು ಹೆತ್ತಗೌಡನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಉಚಿತವಾಗಿ ಅತ್ಯವಶ್ಯವಿರು ರಕ್ತ ಪರೀಕ್ಷೆಯ ಸಿಬಿಸಿ ಉಪಕರಣಗಳನ್ನು ನೀಡಿರುವುದು. ಗ್ರಾಮೀಣ ಭಾಗದ ಬಡಜನರಿಗೆ ಅನುಕೂಲವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೊಡ್ಡಮಗ್ಗೆ ಆಸ್ಪತ್ರೆಗೆ ಹೆಚ್ಚಿನ ಜನರು ಚಿಕಿತ್ಸೆಗೆ ಬರುತ್ತಾರೆ. ಈ ಹಿಂದೆ ಪ್ರಥಮ ಹಂತದ ರಕ್ತಪರೀಕ್ಷೆ ನಡೆಸಲಾಗುತ್ತಿತ್ತು. ಹೊಸದಾಗಿ ಸಿಬಿಸಿ ಉಪಕರಣ ಇರುವುದರಿಂದ ಮಲೇರಿಯಾ, ಡೆಂಘೆ ಹಾಗೂ ಇತರೆ ರಕ್ತದ ಪರೀಕ್ಷೆಗೆಂದು ತಾಲೂಕು ಆಸ್ಪತ್ರೆಗೆ ಹೋಗುವುದು ತಪ್ಪುತ್ತದೆ. ದೊಡ್ಡಮಗ್ಗೆ ಆಸ್ಪತ್ರೆಗೆ ಜನರಿಂದ ಉತ್ತಮ ಪ್ರತಿಕ್ರಿಯೆ ಇದ್ದು, ಇದಕ್ಕೆ ಧಕ್ಕೆಯಾಗದಂತೆ ವೈದ್ಯರು, ಸಿಬ್ಬಂದಿ ಕಾರ್ಯ ನಿರ್ವಹಿಸಬೇಕೆಂದು ಅವರು ಸೂಚನೆ ನೀಡಿದರು.

ಹಾಸನದ ಶಾಹಿ ಸಂಸ್ಥೆಯಲ್ಲಿ ಮುಖ್ಯಸ್ಥರಾಗಿ ನಮ್ಮ ಸಂತೆಮರೂರು ಗ್ರಾಮದವರೇ ಆದ ವಿದ್ಯಾರಾಜೇ ಅರಸು ಅವರು ಕಾರ್ಯನಿರ್ವಹಿಸುತ್ತಿರುವ ಪರಿಣಾಮ ಪ್ರತಿವರ್ಷದ ಸಿಎಸ್ ಆರ್ ಅನುದಾನದಲ್ಲಿ ಹೆಚ್ಚಿನ ಪಾಲು ಹುಟ್ಟಿದ ತಾಲೂಕಿಗೆ ಕೊಡುತ್ತಾ ಬರುತ್ತಿದ್ದಾರೆ ಎಂದರು.

ಗ್ರಾಮೀಣ ಪ್ರದೇಶದ ಜನರಿಗೆ ತುರ್ತಾಗಿ ಗ್ರಾಮೀಣ ಸೇವೆ ಒದಗಿಸುವ ಉದ್ದೇಶದಿಂದ ತುರ್ತಾಗಿ ರಕ್ತ ಪರೀಕ್ಷೆ ಯಂತ್ರಗಳನ್ನು ನೀಡುತ್ತಿದ್ದು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳುವಂತೆ ಶಾಹಿ ಸಂಸ್ಥೆಯ ಮುಖ್ಯಸ್ಥ ವಿದ್ಯಾರಾಜೇ ಅರಸ್ ಅವರು ಮನವಿ ಮಾಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಪುಷ್ಪಲತಾ, ಅರಕಲಗೂಡು ರೋಟರಿ ಕ್ಲಬ್ ಅಧ್ಯಕ್ಷರು ಸದಸ್ಯರು ಪ್ರಾಥಮಿಕ ಆರೋಗ್ಯ ಕೇಂದ್ರ ರಕ್ಷ ಸಮಿತಿಯ ಉಪಾಧ್ಯಕ್ಷರು ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

## ಹಿರೀಸಾವೆಯಲ್ಲಿಂದು ಸಮಾಲೋಚನಾ ಕಾರ್ಯಾಗಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಯುಕ್ತ ಜೂ. 27ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಕೃಷಿ ಸಾಧಕರ ಸಮಾಲೋಚನಾ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಸಾವಯವ ಕೃಷಿಕ ಹೆಚ್.ಪಿ.ರಾಜು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರೀಸಾವೆ ಗ್ರಾಮದ ಸುವರ್ಚಲಾದೇವಿ ಕಲ್ಯಾಣ ಮಂಟಪದಲ್ಲಿ ಕೃಷಿ ಇಲಾಖೆ, ರೈತ ಸಂಘ, ಕಾಡು ಕೃಷಿ ಕುಟುಂಬ ಹಾಗೂ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ರೈತರಿಂದ, ರೈತರಿಗಾಗಿ, ರೈತರಿಗೋಸ್ಕರ ಹಾಗು ರೈತರ ಉಳಿವಿಗಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಾಗಾರಕ್ಕೂ ಮೊದಲು ನಾಡಪ್ರಭು ಕೆಂಪೇಗೌಡ ವೃತ್ತದಲ್ಲಿ ಕೆಂಪೇಗೌಡ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ವಿಶೇಷ ಪೂಜೆ ಸಲ್ಲಿಸಲಾಗುವುದು. ಕೃಷಿ ಸಾಧಕರಾದ ಸಿ.ಡಿ.ಕುಮಾರ್, ಹೀರತ್ತಿಗೌಡ, ಸೋಮಣ್ಣ, ಬಳದರೆ ಮಂಜು ಸೇರಿ ಪ್ರಮುಖ ಸಾವಯವ ಕೃಷಿ ಸಾಧಕರು ಮತ್ತು ಕೃಷಿ ಸಂಶೋಧಕರು ಪಾಲ್ಗೊಳ್ಳಲಿದ್ದಾರೆ. ಕಾಡು ಕೃಷಿ, ಯುವ ಸಮುದಾಯವನ್ನು ಕೃಷಿಯತ್ತ ಸೆಳೆಯುವ ಹಾಗು ಸರ್ಕಾರದ ಗಮನ ಸೆಳೆಯುವ ಬಗ್ಗೆ ಸಂವಾದ ನಡೆಯಲಿದೆ ಎಂದರು.

ಹೋಬಳಿ ವ್ಯಾಪ್ತಿಯ ಸುಮಾರು 300ಕ್ಕೂ ಹೆಚ್ಚು ರೈತರು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಲಿದ್ದಾರೆ. ರೈತರಿಂದ, ರೈತರಿಗಾಗಿ, ರೈತರಿಗೋಸ್ಕರ ಹಾಗು ರೈತರ ಬದುಕಿನ ಉಳಿವಿಗಾಗಿ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

## ಎದೆಯಲಿ ರಾಮ ಭಕ್ತಿಗೀತೆ ಬಿಡುಗಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಿಕ್ಷಕ ಸಿ.ಎನ್.ನಾಗೇಶ್ ಅವರು ರಚಿಸಿರುವ ಎದೆಯಲಿ ರಾಮ ಎಂಬ ಗೀತೆಯನ್ನು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಶುಕ್ರವಾರ ಲೋಕಾರ್ಪಣೆ ಮಾಡಲಾಯಿತು.

ಉದ್ಯಮಿ ಕಂಚಮಾರನಹಳ್ಳಿ ಕಾತರಾಜು ಮಾತನಾಡಿ, ಭಕ್ತಿ ಸಾಹಿತ್ಯ ಮತ್ತು ಸಂಗೀತದ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವ ಉದ್ದೇಶದಿಂದ ರೂಪುಗೊಂಡಿರುವ ಈ ಗೀತೆ ಭಕ್ತರು ಹಾಗೂ ಸಂಗೀತಾಸಕ್ತರ ಗಮನ ಸೆಳೆಯಲಿದೆ. ಇಂದಿನ ವೇಗದ ಬದುಕಿನಲ್ಲಿ ಆಧ್ಯಾತ್ಮಿಕ ಚಿಂತನೆ ಮತ್ತು ನೈತಿಕ ಮೌಲ್ಯಗಳನ್ನು ಉಳಿಸಿಕೊಳ್ಳುವಲ್ಲಿ ಭಕ್ತಿ ಸಂಗೀತದ ಪಾತ್ರ ಮಹತ್ವದ್ದಾಗಿದೆ ಎಂದರು.

ಉತ್ತಮ ಸಂದೇಶ ಹೊಂದಿರುವ ಇಂತಹ ಹಾಡುಗಳು ಸಮಾಜಕ್ಕೆ ದಾರಿದೀಪವಾಗುವುದರ ಜೊತೆಗೆ ಯುವ ಪೀಳಿಗೆಯಲ್ಲಿ ಭಾರತೀಯ ಸಂಸ್ಕೃತಿ, ಭಕ್ತಿ ಮತ್ತು ಮೌಲ್ಯಗಳ ಬಗ್ಗೆ ಆಸಕ್ತಿ ಮೂಡಿಸುತ್ತವೆ. ಎದೆಯಲಿ ರಾಮ ಭಕ್ತಿ ಗೀತೆಯ ಸಾಹಿತ್ಯ, ಸಂಗೀತ ಸಂಯೋಜನೆ ಹಾಗು ಗಾಯನವನ್ನು ಸಿ.ಎನ್. ನಾಗೇಶ್ ಮಾಡಿದ್ದಾರೆ. ರಾಘವೇಂದ್ರ ಸ್ವಾಮಿ ಮೇಲಿನ ಅಚಲ ಭಕ್ತಿ, ರಾಮನಾಮದ ಶಕ್ತಿ ಹಾಗು ಧರ್ಮದ ಮಾರ್ಗದಲ್ಲಿ ನಡೆಯುವ ಬದುಕಿನ





ಮಹತ್ವವನ್ನು ಹೃದಯಸ್ಪರ್ಶಿಯಾಗಿ ಹಾಡಿನ ಮೂಲಕ ಅಭಿವ್ಯಕ್ತಪಡಿಸಿದ್ದಾರೆಂದರು.

ಗಾಯಕ ಸಿ.ಎನ್.ನಾಗೇಶ್ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಯಾಗಿದ್ದ ಟೀಸರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸಂಪೂರ್ಣ ವಿಡಿಯೋ ಬಿಡುಗಡೆ ಮಾಡಿದ್ದೇವೆ. ಈ ಮೊದಲು 21 ಹಾಡುಗಳನ್ನು ರಚಿಸಿದ್ದು ವಿಡಿಯೋ ಸಹಿತ ಬಿಡುಗಡೆಯಾಗುತ್ತಿರುವ ಮೊದಲ ಹಾಡು ಇದಾಗಿದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ, ರವಿಕೀರ್ತಿ ಇದ್ದರು.

## ಮೊಹರಂ ಆಚರಣೆಯಲ್ಲಿ ಶಾಸಕ ಶಿವಲಿಂಗೇಗೌಡ ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ : ಸಮಾಜದಲ್ಲಿ ಭಾವೈಕ್ಯತೆಯ ಸಂಕೇತವಾಗಿರುವ ಮುಸ್ಲಿಮರ ಪವಿತ್ರ ಮೊಹರಂ ಹಬ್ಬದ ಅಂಗವಾಗಿ ಕೆಂಡದ ಗುಂಡಿಗೆ ಹಿಂದು ಮುಸ್ಲಿಂ ಎಂಬ ಭೇದವಿಲ್ಲದೆ ಎಲ್ಲರೂ ಉಪ್ಪು ಮತ್ತು ಮೆಣಸನ್ನು ಹಾಕುವ ಮೂಲಕ ಭಾವೈಕ್ಯತೆ ಸಂದೇಶವನ್ನು ಸ್ಥಳೀಯ ಶಾಸಕ ಕೆ.ಎಂ. ಶಿವಲಿಂಗೇಗೌಡರು ಸಾರಿದರು.

ಮೊಹರಂ ಆಚರಣೆಯ 9ನೇ ದಿನ ಸಂಪ್ರದಾಯಿದಂತೆ ಮುಸ್ಲಿಂ ಧರ್ಮೀಯರು ಬಾಬಯ್ಯನ ಆರಾಧನೆ ಮಾಡುತ್ತಾರೆ. ಈ ಆಚರಣೆಯಲ್ಲಿ ಬಾಬಯ್ಯನಿಗೆ ಹಿಂದೂ ಧರ್ಮೀಯರು ಸಹ ಸಕ್ಕರೆ ಮತ್ತು ಕಡ್ಲೆಯನ್ನು ಬಾಬಯ್ಯನಿಗೆ ಸಮರ್ಥಿಸಿ ನಂತರ ಕೆಂಡದ ಗುಂಡಿಗೆ ಉಪ್ಪು ಮತ್ತು ಮೆಣಸನ್ನ ಹಾಕಿದರೆ ಮನದ ಇಷ್ಟಾರ್ಥ ಈಡೇರುತ್ತವೆ ಎಂಬ ನಂಬಿಕೆ





ಇರುವುದರಿಂದ ಈ ಆಚರಣೆಯಲ್ಲಿ ಹಿಂದೂ ಮತ್ತು ಮುಸ್ಲಿಮರು ಸೇರಿ ಆಚರಿಸುವುದು ಮೊಹರಂ ಹಬ್ಬದ ವಿಶೇಷವಾಗಿದೆ.

ಬಾಬಯ್ಯನ ದರ್ಶನ ಮಾಡಿ ಕೆಂಡಕ್ಕೆ ಉಪ್ಪು ಮತ್ತು ಮೆಣಸನ್ನು ಸಮರ್ಪಿಸಿದ ಶಾಸಕರು ಮಾತನಾಡಿ, ಯಾವುದೇ ಧರ್ಮದ ಹಬ್ಬ ಹರಿದಿನಗಳ ಆಚರಣೆ ಆದರೂ ಒಂದು ಧರ್ಮೀಯರು ಆಚರಣೆ ಮಾಡುವುದಕ್ಕಿಂತ ಇತರ ಧರ್ಮಿಯರು ಸೇರಿ ಆಚರಿಸಿದರೆ ಆಚರಣೆಯ ಮೌಲ್ಯ ಹೆಚ್ಚುತ್ತದೆ. ಅಲ್ಲದೆ ಸಮಾಜದಲ್ಲಿ ಸಾಮರಸ್ಯದ ವಾತಾವರಣ ನಿರ್ಮಾಣವಾಗುತ್ತದೆ. ಅಂತಹ ಆಚರಣೆಗಳಲ್ಲಿ ಮೊಹರಂ ಹಬ್ಬ ಒಂದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸುವರು.

ಕಾರ್ಯಕ್ರಮದಲ್ಲಿ ನಗರಸಭೆ ನಿಕಟ ಪೂರ್ವ ಅಧ್ಯಕ್ಷ ಎಂ.ಸಮೀವುಲ್ಲಾ ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಸಿಕಂದರ್, ಸುನ್ನಿ ಮುಸ್ಲಿಂ ಜಮಾತ್ ಕಮಿಟಿ ಅಧ್ಯಕ್ಷ ಅಫ್ರೋಜ್ ಪಾಷ, ಉಪಾಧ್ಯಕ್ಷ ಸೈಯದ್ ದಸ್ತಿಗೀರ್, ಕಾರ್ಯದರ್ಶಿ ಮಹಮ್ಮದ್ ಶರೀಫ್ ನಗರಸಭೆ ಮಾಜಿ ಸದಸ್ಯರಾದ ಅಬ್ದುಲ್ ಜಮೀಲ್, ಯೂನಸ್, ರೋಷನ್, ಮುಸ್ಲಿಂ ಸಮಾಜದ ಮುಖಂಡರಾದ ಟಿಪ್ಪು, ಮೋಯ್ದಿನ್ ಪಾಷ ಮೊದಲಾದವರಿದ್ದರು.

# ರೋಟರಿ ಕ್ಲಬ್ ಕ್ವಾಂಟಾಗೆ ಡಾ.ಬಸವರಾಜು ಅಧ್ಯಕ್ಷ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರೋಟರಿ ಕ್ಲಬ್ ಆಫ್ ಕ್ವಾಂಟ್ ಹಾಸನದ 2026-27ನೇ ಸಾಲಿನ ಪದಗ್ರಹಣ ಸಮಾರಂಭ ಇತ್ತೀಚೆಗೆ ನಗರದ ನಂದಗೋಕುಲ ಕನ್ವೆನ್ಷನ್ ಹಾಲ್‌ನಲ್ಲಿ ಅದ್ದೂರಿಯಾಗಿ ನಡೆಯಿತು.

ಹಿಂದಿನ ಅಧ್ಯಕ್ಷ ರೊ.ಸನ್ಮತಿ ಪ್ರಸಾದ್ ಅವರ ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆ, ಪ್ರತಿಷ್ಠಿತ ಹಾಸನಾಂಬ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವ್ಯವಸ್ಥಾಪಕ ವೈದ್ಯಕೀಯ ನಿರ್ದೇಶಕ(ಎಂಡಿ) ಡಾ. ಜಿ.ಎನ್. ಬಸವರಾಜು, ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ನೂತನ ಕಾರ್ಯದರ್ಶಿಯಾಗಿ ರೊ.ಯತೀಶ್, ಖಜಾಂಚಿಯಾಗಿ ರೊ. ಹೇಮಂತಕುಮಾರ್ ಜವಾಬ್ದಾರಿ ವಹಿಸಿಕೊಂಡರು.




ಬಳಿಕ ಮಾತನಾಡಿದ ರೊ.ಡಾ. ಬಸವರಾಜು, ರೋಟರಿ ಸಂಸ್ಥೆ ಮನುಕುಲದ ಸೇವೆಯನ್ನು ತನ್ನ ಧ್ಯೇಯವನ್ನಾಗಿಸಿಕೊಂಡು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರವಾಹ, ಯುದ್ಧ, ಬರಗಾಲ ಹಾಗೂ ಕೊರೊನಾ ಸೇರಿ ವಿವಿಧ ಪ್ರಕೃತಿ ವಿಕೋಪ ಮತ್ತು ಜಾಗತಿಕ ಸಾಂಕ್ರಾಮಿಕ ಬಿಕ್ಕಟ್ಟು ವೇಳೆ ಸಂತ್ರಸ್ತರ ನೆರವಿಗೆ ಧಾವಿಸಿದೆ. ಭಾರತವನ್ನು ಪೋಲಿಯೋ ಮುಕ್ತ ರಾಷ್ಟ್ರವನ್ನಾಗಿಸುವಲ್ಲಿ ರೋಟರಿ ಪಾತ್ರ ಮಹತ್ವದ್ದಾಗಿದೆ. ಮುಂಬರುವ ದಿನಗಳಲ್ಲಿ ಸಮಾಜಮುಖಿ ಹಾಗೂ ಜನೋಪಯೋಗಿ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

ಪದಗ್ರಹಣ ಅಧಿಕಾರಿಯಾಗಿ ಭಾಗವಹಿಸಿದ್ದ ಡಿಸ್ಟ್ರಿಕ್ಟ್ ಗವರ್ನರ್ ಎಲೆಕ್ಟ್ ರೊ. ವಸಂತ್ ಹೊಬ್ಳಿಕಾರ್ ಮಾತನಾಡಿ, ರೋಟರಿ ಕೇವಲ ಒಂದು ಸಂಘಟನೆಯಲ್ಲ, ವಿಶ್ವವ್ಯಾಪಿ ಸೇವಾ ಪರಿವಾರವಾಗಿದೆ. ಸಮಾಜದ ದೀನ-ದುರ್ಬಲರು, ಆಶ್ರಯ ರಹಿತರು ಹಾಗೂ ನೊಂದವರ ಬದುಕಿನಲ್ಲಿ ಆಶಾಭಾವ ಮೂಡಿಸುವುದು ಪ್ರತಿಯೊಬ್ಬ ರೋಟೇರಿಯನ್‌ನ ಕರ್ತವ್ಯ.

ಕೃಷಿ, ಆರೋಗ್ಯ, ಶಿಕ್ಷಣ ಕ್ಷೇತ್ರಗಳಿಗೆ ಇನ್ನಷ್ಟು ಪರಿಣಾಮಕಾರಿ ಯೋಜನೆ ರೂಪಿಸುವುದರ ಜೊತೆಗೆ ರೋಟರಿ ಫೌಂಡೇಶನ್‌ಗೆ ಹೆಚ್ಚಿನ ಬೆಂಬಲ ನೀಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಜಿಲ್ಲಾ ಗವರ್ನರ್‌ಗಳಾದ ಎಂ.ಕೆ. ಗೋವರ್ಧನ್ ಕುಮಾರ್ ಹಾಗೂ ರೊ. ರಮೇಶ್ ಅವರು ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು. ಹಿರಿಯ ರೊಟೇರಿಯನ್‌ಗಳಾದ ರೊ. ಜಿತೇಂದ್ರ, ರೊ. ಮಂಜುನಾಥ್, ರೊ.ಅರುಣ್ ಕುಮಾರ್, ರೊ. ಹರೀಶ್ ಕುಮಾರ್, ರೊ. ರವಿ ಎಚ್.ಕೆ., ರೊ. ವಿಶ್ವನಾಥ್, ರೊ. ಡಾ. ಸತೀಶ್, ರೊ. ಭಾರತೀಶ್, ಅರುಣ್ ಮೊದಲಾದವರಿದ್ದರು.

ಕಾರ್ಯಕ್ರಮದಲ್ಲಿ ಆನ್ ರೇವತಿ ಅರುಣ್ ಪ್ರಾರ್ಥಿಸಿದರು. ರೊ. ಬಿ.ಡಿ. ಶಂಕರೇಗೌಡ ಹಾಗೂ ಆನ್ಸ್ ವೀಣಾ ನಿರೂಪಿಸಿದರು. ರೊ. ಹೇಮಂತಕುಮಾರ್ ವಂದಿಸಿದರು.

# ಗ್ರಾಮೀಣ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದರಿಂದ ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಚಿಂತಿಸಬೇಕು ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಸಲಹೆ ನೀಡಿದರು.

ತಾಲ್ಲೂಕಿನ ಮೊಸಳೆಹೊಸಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಎಂಜಿನೀಯರಿಂಗ್ ಕಾಲೇಜು ವಿದ್ಯಾರ್ಥಿನಿಯರಿಗಾಗಿ ನೂತನವಾಗಿ ನಿರ್ಮಿಸಿರುವ ಹಾಸ್ಟೆಲ್ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಕಾಲೇಜುಗಳಲ್ಲಿ ಖಾಸಗಿ ಕಾಲೇಜುಗಳಿಗಿಂತ ಉತ್ತಮ ಶಿಕ್ಷಣ ಒದಗಿಸಲು ಸರ್ಕಾರ ಮುತುವರ್ಜಿವಹಿಸಬೇಕು ಎಂದು ಹೇಳಿದರು.

ಮೊಸಳೆಹೊಹಳ್ಳಿ ಸರ್ಕಾರಿ ಎಂಜಿನೀಯರಿಂಗ್ ಕಾಲೇಜಿನಲ್ಲಿ 1,445 ಮಕ್ಕಳು ಮತ್ತು ಪಾಲಿಟೆಕ್ನಿಕ್‌ನಲ್ಲಿ 450 ಮಕ್ಕಳು ಓದುತ್ತಿದ್ದಾರೆ. ಆದರೆ ಇಂದು ಶಿಕ್ಷಣ ಮಾರಾಟದ ವಸ್ತುವಾಗಿದೆ. ಸರ್ಕಾರಿ ಎಂಜಿನೀಯರಿಂಗ್ ಕಾಲೇಜು ಪ್ರವೇಶಕ್ಕೆ 40 ಸಾವಿರ ರೂ. ಶುಲ್ಕ, ಪಾಲಿಟೆಕ್ನಿಕ್ ಪ್ರವೇಶಕ್ಕೆ 4,800 ರೂ ಶುಲ್ಕ ಇದೆ. ಇದರಿಂದ ಬಡ ಕುಟುಂಬದ



ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ ಎಂದರು.

ಹೆಣ್ಣು ಮಕ್ಕಳು ಚೆನ್ನಾಗಿ ಓದಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಮೂಲಭೂತ ಸೌಕರ್ಯಗಳು ಬಹುಮುಖ್ಯ. ಈ ನಿಟ್ಟಿನಲ್ಲಿ ಮುಖ್ಯ ರಸ್ತೆಯಿಂದ ಕಾಲೇಜಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ಅನುಕೂಲವಾಗುವಂತೆ 15 ರಿಂದ 20 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಚಿಂತನೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ರಂಗಸ್ವಾಮಿ ಹಾಗೂ ಇತರರು ಹಾಜರಿದ್ದರು.

# ಲೋಕಕಲ್ಯಾಣಾರ್ಥ ಲಕ್ಷ್ಮೀ ನರಸಿಂಹಸ್ವಾಮಿಗೆ ಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಜಾವಗಲ್: ಜಾವಗಲ್ ಶಾಲಂಕಾಯನ ಸೌಹಾರ್ದ ಬಳಗದ ವತಿಯಿಂದ ಇತಿಹಾಸ ಪ್ರಸಿದ್ಧ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದಲ್ಲಿ ಲೋಕಕಲ್ಯಾಣಾರ್ಥ 16ನೇ ವರ್ಷದ ವಿವಿಧ ಸೇವಾ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು.

ಮುಂಜಾನೆಯಿಂದ ಲಕ್ಷ್ಮೀ ನರಸಿಂಹಸ್ವಾಮಿಗೆ ಏಕಾದಶವಾರು ರುದ್ರಪೂರ್ವಕ ಪಂಚಾಮೃತ ಅಭಿಷೇಕ, ಅರ್ಚನೆ, ಅಲಂಕಾರ ಹಾಗು ಮಂಗಳಾರತಿ ನಡೆಯಿತು. ಬಳಿಕ ಮಹಾಗಣಪತಿ ಪೂಜೆ, ಸ್ವಸ್ತಿ ಪುಣ್ಯವಾಚನ, ಮಹಾಸಂಕಲ್ಪ ಹಾಗೂ ದೇವನಾಂದಿ ನೆರವೇರಿಸಲಾಯಿತು.



ಸಾಗರದ ಜೋಗ ಜೋಡಿ ಚಾಮುಂಡೇಶ್ವರಿ ದೇವಾಲಯದ ಅರ್ಚಕ ಕೃಷ್ಣಮೂರ್ತಿ ಭಟ್ ಹಾಗು ವೇದಬ್ರಹ್ಮ ಶಿವಶಂಕರ ಭಟ್ ಅವರ ಆಚಾರ್ಯತ್ವದಲ್ಲಿ ನರಸಿಂಹ ಗಾಯತ್ರಿ ಮಂತ್ರಪೂರ್ವಕ ಹೋಮ, ನವಗ್ರಹ, ಮಹಾಗಣಪತಿ, ಲಕ್ಷ್ಮೀ ನರಸಿಂಹ, ಮೃತ್ಯುಂಜಯ, ಚಾಮುಂಡೇಶ್ವರಿ, ಮಹಾಲಕ್ಷ್ಮೀ ಸೇರಿದಂತೆ ವಿವಿಧ ದೇವತಾ ಹೋಮಗಳನ್ನು ನೆರವೇರಿಸಿ ಪೂರ್ಣಾಹುತಿ ಸಲ್ಲಿಸಲಾಯಿತು.

ನಾಡಿನ ಒಳಿತಿಗಾಗಿ ಹಾಗೂ ಸಮೃದ್ಧ ಮಳೆ-ಬೆಳೆಗಾಗಿ ವರುಣದೇವರ ಪ್ರಾರ್ಥನೆ ಸಲ್ಲಿಸಿ, ಅನ್ನಸಂತರ್ಪಣೆ ನಡೆಸಲಾಯಿತು. ಬಳಗದ ಅಧ್ಯಕ್ಷ ಜೆ.ಎಂ. ಶಿವಸ್ವಾಮಿ, ಉಪಾಧ್ಯಕ್ಷ ಜೆ.ಹೆಚ್. ಶಿವಶಂಕರ್, ಕಾರ್ಯದರ್ಶಿ ಜೆ.ಕೆ.ಮುರುಳೀಧರ, ಪದಾಧಿಕಾರಿಗಳು ಇದ್ದರು.

# ಶಿವಲಿಂಗೇಗೌಡರಿಗೆ ಸಚಿವ ಸ್ಥಾನಕ್ಕಾಗಿ ದೇವರಿಗೆ ಮೊರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಶಾಸಕ ಕೆ.ಎಂ. ಶಿವಲಿಂಗೇಗೌಡರಿಗೆ ಮಂತ್ರಿ ಸ್ಥಾನ ದೊರೆಯಲಿ ಎಂದು ತಾಲೂಕು ವಾಲ್ಮೀಕಿ ಸಮಾಜದ ಮುಖಂಡರು ಸುಕ್ಷೇತ್ರ ಯಾದಾಪುರದ ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ದೇವಸ್ಥಾನದಲ್ಲಿ 101 ಈಡುಗಾಯಿ ಒಡೆದು ಪ್ರಾರ್ಥಿಸಿದರು.

ಟಿಎಪಿಸಿಎಂಎಸ್ ಅಧ್ಯಕ್ಷ ಕೆಲ್ಲಂಗೆರೆ ಕುಮಾರ್, ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾಜಿ ಅಧ್ಯಕ್ಷ ಬಾಯ್ಲರ್ ಕುಮಾರ್ ಅವರ ನೇತೃತ್ವದಲ್ಲಿ ಯಾದಾಪುರ ಸಿದ್ದೇಶ್ವರ ಸ್ವಾಮಿಯ ಸನ್ನಿಧಾನಕ್ಕೆ ಆಗಮಿಸಿದ ವಾಲ್ಮೀಕಿ ಸಮಾಜದ ಜನರು ವಿಶೇಷ ಪೂಜೆ ಸಲ್ಲಿಸಿ ನಂತರ ಬೆಟ್ಟದ ಮೆಟ್ಟಿಲು ಬಳಿ ಈಡುಗಾಯಿ ಒಡೆಯುವ ಮೂಲಕ ಶಿವಲಿಂಗೇಗೌಡರಿಗೆ ಸರ್ಕಾರದಲ್ಲಿ ಮಂತ್ರಿ ಸ್ಥಾನ ದೊರೆಯಲಿ ಎಂದು ದೇವರಲ್ಲಿ ಮೊರೆ ಇಟ್ಟರು.

ಕೆಲ್ಲಂಗೆರೆ ಕುಮಾ ರ್ ಮಾತನಾಡಿ, ಶಿವಲಿಂಗೇಗೌಡರಲ್ಲಿರುವ ಜನಪರ ಚಿಂತನೆ ಅವರ ನಾಯಕತ್ವದ ಗುಣ ಇತರರಿಗೆ ಮಾದರಿಯಾಗಿದ್ದು ಈಗಾಗಲೇ ಅರಸೀಕೆರೆ ವಿಧಾನಸಭಾ ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಿದ್ದಾರೆ. ಅವರಿಗೆ ಸಚಿವ ಸ್ಥಾನ ಮಾನ ಸಿಕ್ಕರೆ ರಾಜ್ಯದ ಅಭಿವೃದ್ಧಿಯಾಗುತ್ತದೆ ಎಂದರು.

ಬಾಯ್ಲರ್ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೇ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದಲ್ಲಿ ಶಿವಲಿಂಗೇಗೌಡರು ಇರುತ್ತಾರೆ ಎಂಬುದು ಕ್ಷೇತ್ರದ ಜನತೆಯ ಆಸೆಯಾಗಿತ್ತು. ಎರಡನೇ ಅವಧಿಯಲ್ಲಿ ಮಂತ್ರಿ ಮಾಡುವುದಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದರು. ಈಗ ಅದನ್ನು ಈಡೇರಿಸುವ ಮೂಲಕ ಕ್ಷೇತ್ರದ ಜನತೆಯ ದಶಕಗಳ ಬೇಡಿಕೆಯನ್ನು ಈಡೇರಿಸಲಿ ಎಂದು ಮನವಿ ಮಾಡಿದರು.

ವಾಲ್ಮೀಕಿ ಸಮಾಜದ ಕೊಟ್ರೇಶ್ ಕಲ್ಯಾಡಿ, ರೇಖಾ ಜಯಣ್ಣ, ಸತೀಶ್, ರಾಜಾನಾಯ್ಕ್, ಹರೀಶ್ ಮತ್ತಿತರರಿದ್ದರು.

# ಗುಡ್ಡೇನಹಳ್ಳಿಯ ನಿವಾಸಿಗಳಿಗೆ ಕುಡಿಯಲು ಚರಂಡಿ ನೀರೇ ಗತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕುಡಿಯುವ ನೀರು ಪೂರೈಸುವ ಪೈಪ್ ಒಡೆದು ಚರಂಡಿ ನೀರು ಸೇರುತ್ತಿರುವ ಪರಿಣಾಮ ಕಲುಷಿತ ನೀರನ್ನೇ ಕುಡಿಯುವ ದುಸ್ಥಿತಿ ನಗರದ ಗುಡ್ಡೇನಹಳ್ಳಿಯಲ್ಲಿ ನಿರ್ಮಾಣವಾಗಿದೆ.

ಚರಂಡಿಯಲ್ಲೇ ಕುಡಿಯುವ ನೀರಿನ ಪೈಪ್ ಅಳವಡಿಸಲಾಗಿದೆ. 34ನೇ ವಾರ್ಡ್‌ಗೆ ಸೇರುವ ಈ ಪ್ರದೇಶದಲ್ಲಿ ಸಮಸ್ಯೆ ಶುರುವಾಗಿ ವರ್ಷಗಳೇ ಕಳೆದಿದ್ದರೂ ಪಾಲಿಕೆ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿಲ್ಲ. ಕುಡಿಯುವ ನೀರಿನ ಜೊತೆಗೆ ಕೊಳಚೆ ನೀರು ಸೇರುತ್ತಿದೆ. ನಿವಾಸಿಗಳೆಲ್ಲ ಬಡ ಕೂಲಿ ಕಾರ್ಮಿಕರೇ ಆಗಿದ್ದು, ಅನಿವಾರ್ಯವಾಗಿ ಆ ನೀರನ್ನೇ ಸೋಸಿ, ಕಾಯಿಸಿ ಆರಿಸಿ ಕುಡಿಯುತ್ತಿದ್ದಾರೆ. ಅನೇಕರು ಅನಾರೋಗ್ಯಕ್ಕೂ ತುತ್ತಾಗುತ್ತಿದ್ದಾರೆ.

ಸಾಂಕ್ರಾಮಿಕ ರೋಗ ಭೀತಿ: ಇಳಿಜಾರಿನಲ್ಲಿರುವ ಮನೆಗಳಾಗಿರುವುದರಿಂದ ಚರಂಡಿ ನೀರು ಅಷ್ಟೇ ಪೈಪ್‌ಗೆ ಸೇರುತ್ತಿದೆ. ಮನೆಯ ತ್ಯಾಜ್ಯ, ಕಸ ಕಡ್ಡಿಗಳೆಲ್ಲ ಪೈಪ್ ಸೇರುತ್ತಿದೆ. ಮಹಾನಗರ ಪಾಲಿಕೆಯಿಂದ ನಾಲ್ಕು ದಿನಕ್ಕೊಮ್ಮೆ ಮಾತ್ರ ನೀರು ಸರಬರಾಜು ಆಗುತ್ತಿದ್ದು, ಅದೂ ಸಂಪೂರ್ಣ ಕಲುಷಿತವಾಗಿದೆ. ಗರ್ಭಿಣಿಯರು, ಮಕ್ಕಳು ಹಾಗೂ ವಯಸ್ಕರು ಅಶುದ್ಧ ನೀರು ಕುಡಿದು ಅನಾರೋಗ್ಯ ಸಮಸ್ಯೆ ಎದುರಿಸುವಂತಾಗಿದೆ. ಚರಂಡಿ ಸ್ವಚ್ಛ ಮಾಡದೆ ಇರುವ ಪರಿಣಾಮ ಸೊಳ್ಳೆಗಳು ಹೆಚ್ಚಾಗಿ ಸಾಂಕ್ರಾಮಿಕ ರೋಗ ಭೀತಿಯು ನಿವಾಸಿಗಳನ್ನು ಕಾಡುತ್ತಿದೆ.

### ಸದಸ್ಯರಿಲ್ಲ- ಅಧಿಕಾರಿಗಳಿಗೆ ಕಿವಿ ಇಲ್ಲ

ಹಾಸನ ಮಹಾನಗರ ಪಾಲಿಕೆಗೆ ಸದ್ಯ ಚುನಾಯಿತ ಪ್ರತಿನಿಧಿಗಳಿಲ್ಲ. ವಾರ್ಡ್ ಸದಸ್ಯರು ಇದ್ದಿದ್ದರೆ ಅವರನ್ನು ಕರೆದು ಸಮಸ್ಯೆ ಹೇಳಬಹುದಿತ್ತು. ಬಡಾವಣೆಯ ನಿವಾಸಿಗಳೇ ಅನೇಕ ಬಾರಿ ಪಾಲಿಕೆಗೆ ಭೇಟಿ ನೀಡಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಬಡವರು, ಅನಕ್ಷರಸ್ಥರೇ ಹೆಚ್ಚಿರುವ ಇಲ್ಲಿನವರ ಸಮಸ್ಯೆಗೆ ಪರಿಹಾರ ಕಲ್ಪಿಸಲು ಯಾರೂ ಇಲ್ಲವಾಗಿದ್ದಾರೆ ಎಂದು ಸ್ಥಳೀಯರು ಅಸಹಾಯಕತೆ ವ್ಯಕ್ತಪಡಿಸಿದರು.

# ಕೃಷಿ ಪತ್ತಿನ ಸಂಘಕ್ಕೆ ಬಿ.ಗಿರೀಶ್ ಅವಿರೋಧ ಆಯ್ಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿ.ಗಿರೀಶ್ ಅವರು ಅವಿರೋಧ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಗಿರೀಶ್ ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಗುರುಮೂರ್ತಿ ಅವಿರೋಧ ಆಯ್ಕೆ ಘೋಷಿಸಿದರು.

# ಇತಿಹಾಸದಲ್ಲಿ ಈ ದಿನ

## ಜೂನ್-27

1857: ಭಾರತದ ಮೊದಲ ಸ್ವಾತಂತ್ರ್ಯ ಸಮರದ ವೇಳೆ ಕಾನ್ಪುರದಲ್ಲಿ ನಡೆದ ಸತಿಚೌರಾ ಘಾಟ್ ಘಟನೆ ಸಂಭವಿಸಿತು.

1954: ಜಗತ್ತಿನ ಮೊದಲ ಅಣು ವಿದ್ಯುತ್ ಸ್ಥಾವರವಾದ ಒಬ್ನಿನ್ಸ್ಕ ಅಣು ವಿದ್ಯುತ್ ಸ್ಥಾವರ ವಾಣಿಜ್ಯ ಉತ್ಪಾದನೆ ಆರಂಭಿಸಿತು.

1977: ಜಿಬೂಟಿ ಸ್ವಾತಂತ್ರ್ಯ ಪಡೆದು, ಜಿಬೂಟಿ ಫ್ರಾನ್ಸ್‌ನಿಂದ ಸ್ವತಂತ್ರ ರಾಷ್ಟ್ರವಾಯಿತು.

1985: ಅಟ್ಲಾಂಟಿಕ್ ಏರ್ ಇಂಡಿಯಾ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ತನಿಖೆ ಜಾಗತಿಕ ಮಟ್ಟದಲ್ಲಿ ತೀವ್ರಗೊಂಡಿತು.

### ಜನನ

1838: ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ, ಪ್ರಸಿದ್ಧ ಕಾದಂಬರಿಕಾರ ಮತ್ತು ವಂದೇ ಮಾತರಂ ಗೀತೆಯ ರಚನಕಾರ

1964: ಅಶೋಕ್ ಸರಾಫ್, ಖ್ಯಾತ ಭಾರತೀಯ ನಟ

### ನಿಧನ

2001: ಜಾಕ್ ಲೆಮನ್, ಖ್ಯಾತ ಹಾಲಿವುಡ್ ನಟ

# ನಾನು.....! ಮೋಹಿನಿ ಗಂಡಾ, ಮೋಹನಾ-3

**ಧನಂಜಯ ಜೀವಾಳ ಬಿ.ಕೆ.**

ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ ಅಂದ್ಕೊಂಡು ಮೋಹನ ನನ್ನೊಡನೆ ಮೂಡಿಗೆರೆಗೆ ಬಸ್ ಹತ್ತಿದ. ಬೆಂಗಳೂರಿನ ರಾಜಾಜಿನಗರದ ಎನ್.ವೈ.ಎ.ಸಿ.ಯವರು ರಾಜ್ಯ ಮಟ್ಟದ ಚಾರಣವನ್ನು ಶಿರಾಡಿಘಾಟಿಯ ರೈಲ್ವೇ ಟ್ರ್ಯಾಕಿನಲ್ಲಿ ಹಮ್ಮಿಕೊಂಡಿರುವುದಾಗಿಯೂ ಆಸಕ್ತರು ಸಂಪರ್ಕಿಸಬೇಕಾಗಿಯೂ, ಪ್ರಜಾವಾಣಿಯಲ್ಲಿ ಜಾಹೀರಾತು ನೀಡಿದ್ದರು. ಉದ್ಯೋಗದ ಏಕಾತನತೆಯಿಂದ ಬೇಸತ್ತಿದ್ದ ನಾನು ಅವರನ್ನು ಸಂಪರ್ಕಿಸಿ ವಿವರಗಳನ್ನು ತಿಳಿದುಕೊಂಡು ಅವರೊಡನೆ ಚಾರಣ ಹೊರಟಿದ್ದೆ. ಸರಿ, ಈ ಮೋಹನನ ಚರ್ಬಿ ಕರಗಿಸೋಣ ಎಂದುಕೊಂಡು, ಅವನನ್ನೂ ನನ್ನೊಡನೆ ಹೊರಡಿಸಿಕೊಂಡಿದ್ದೆ. ಸೋಮವಾರ ಸಂಜೆ ಮೂಡಿಗೆರೆ ತಲುಪಿದೆವು. ಗುರುವಾರ ಬೆಳಗ್ಗಿನ ಜಾವವೇ ಸಕಲೇಶಪುರದಲ್ಲಿ ಎನ್.ವೈ.ಎ.ಸಿ. ಯವರ ತಂಡವನ್ನು ನಾವು ಸೇರಿಕೊಳ್ಳಬೇಕಿತ್ತು. ಮಂಗಳವಾರ ಬೆಳಗ್ಗಿನಿಂದಲೇ ಈ ಮೋಹನನಿಗೆ ಶೀತ- ಜ್ವರ ಪ್ರಾರಂಭವಾಗಬೇಕೇ? ನಿಮಿಷಕ್ಕೆ ಸರಾಸರಿ ಹದಿನೈದು ಸೀನನ್ನು ನಿರಂತರವಾಗಿ ಹೊರಹಾಕತೊಡಗಿದ. ನೀರು ಬದಲಾದ್ದರಿಂದಲೋ, ಮನೆಯಿಂದ ಹೊರಹಾಕಿಸಿಕೊಂಡ ಟೆನ್ಶನ್‌ನಿಂದಲೋ, ವಾತಾವರಣ ಬದಲಾದ್ದರಿಂದಲೋ ಶೀತ-ಜ್ವರ ನಿಯಂತ್ರಣಕ್ಕೆ ಬಾರದಾಯ್ತು. ಬುಧವಾರ ಈತನ ಶೀತ-ಜ್ವರ ಸುಮಾರಾಗಿ ಕಡಿಮೆಯಾಗಿತ್ತು. ಆದರೆ ಸುಸ್ತು ಹಾಗೇ ಇದ್ದದ್ದರಿಂದ ಅವನನ್ನು ಚಾರಣಕ್ಕೆ ಕರೆದೊಯ್ಯುವಂತಿರಲಿಲ್ಲ.

ನನಗೂ ಇವನನ್ನು ಬಿಟ್ಟು ಹೋಗಲು ಮನಸ್ಸಿರಲಿಲ್ಲ. ಆದರೆ ರೈಲ್ವೆ ಟ್ರ್ಯಾಕ್‌ನಲ್ಲಿ ಟ್ರೆಕ್ಕಿಂಗ್ ಮಾಡಬೇಕೆನ್ನುವುದು ನನ್ನ ಬಹುದಿನಗಳ ಆಸೆ. ಸಂಜೆಯ ವೇಳೆಗೆ ನನ್ನೊಡನೆ ಷಟಲ್ ಆಡುವ ಮಟ್ಟಿಗೆ ನೆಟ್ಟಗಾದ ಮೋಹನ ತಾನೂ ಟ್ರೆಕ್ಕಿಂಗ್‌ಗೆ ಬರಲು ಸಿದ್ಧನಾದ. ಮೂರು ದಿನಗಳ ಟ್ರೆಕ್ಕಿಂಗ್‌ಗೆ ಹೀಗೆ ರಿಕವರಿಂಗ್ ಕ್ಯಾಂಡಿಡೇಟನ್ನು ಕರೆದುಕೊಂಡು ಹೋಗುವುದು, ಘಟ್ಟಕ್ಕೆ ಹೋಗುವವರಿಗೆ ಕೊಡಲಿ ಸಿಕ್ಕಿಸಿದಂತೆ ಎಂದುಕೊಂಡು ಅವನನ್ನು ವಿಶ್ರಾಂತಿ ಪಡೆಯುವಂತೆ ಹೇಳಿ, ಹಿಂದಿನ ದಿನವೇ ಸಕಲೇಶಪುರಕ್ಕೆ ಹೋಗಿ ಉಳಿದುಕೊಳ್ಳಬೇಕಾದ್ದರಿಂದ ಬೆಳಿಗ್ಗೆಯಿಂದಲೇ




ಮಾಡಿಟ್ಟುಕೊಂಡಿದ್ದ ಸಿದ್ಧತೆಗಳೊಂದಿಗೆ ಗೆಳೆಯ ನಾಸೀರನಿಗೆ ಹೊರಡಲು ಹೇಳಿ ಕಳಿಸಿದೆ.

**ಗ್ರಾಮಾಯಣ**

ಗೆಳೆಯ ನಾಸಿರ್ ಹಾಗೂ ನಾನು ಈ ಚಾರಣ ತಂಡವನ್ನು ಸಕಲೇಶಪುರದಲ್ಲಿ ಸೇರಿಕೊಂಡು ಮುಂದೆ ಹೋಗುವುದೆಂದು ನಿರ್ಧಾರವಾಯ್ತು. ಬೆಳಿಗ್ಗೆ ಮೂಡಿಗೆರೆಯಿಂದ ಹೊರಟು ಬೆಂಗಳೂರಿನಿಂದ ಬರುವ ಎನ್.ವೈ.ಎ.ಸಿ ತಂಡವನ್ನು ಸಮಯಕ್ಕೆ ಸರಿಯಾಗಿ ಸೇರುವುದು ಸಾಧ್ಯವಿಲ್ಲವೆಂದು ಅರಿತು ಹಿಂದಿನ ದಿನವೇ ಸಕಲೇಶಪುರದ ಯಾವುದಾದರೂ ವಸತಿ ಗೃಹದಲ್ಲಿ ತಂಗುವುದು, ಬೆಳಿಗ್ಗೆ ಜೊತೆಯಾಗುವುದೆಂದು ಯೋಜಿಸಿದೆವು. ಮೂರು ದಿನದ ಕಾರ್ಯಕ್ರಮವಾದ್ದರಿಂದ ಕನಿಷ್ಠ ಎರಡು ರಾತ್ರಿ ಕಾಡಿನಲ್ಲಿ ಕಳೆಯಬೇಕಾಗಬಹುದೆಂದು ಬೇಕಾದ ವಸ್ತುಗಳ ಜೋಡಣೆ ಆರಂಭವಾಯ್ತು. ಕತ್ತಿ, ಟಾರ್ಚ್, ಎರಡು ಜೀನ್ಸ್ ಪ್ಯಾಂಟ್, ಎರಡು ಟೀ ಶರ್ಟ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ನೀರಿನ ಬಾಟಲ್ ಇತ್ಯಾದಿ.

ಹಿಂದಿನ ದಿನ ಸಂಜೆ ಐದಕ್ಕೆ ನಾಸೀರ್‌ನನ್ನು ಕಾಯುತ್ತಾ ಕುಳಿತರೆ ಆಸಾಮಿ ಪತ್ತೆಯಿಲ್ಲ!! ಅವನ ಮನೆಗೆ ಹೋದರೆ ಅವನು ಬೆಳಿಗ್ಗೆಯೇ ಉಳ್ಳಾಲದ ಅವನಕ್ಕನ ಮನೆಗೆ ಹೋದನಂತೆ. ಅಯೋಗ್ಯನ ಮೇಲೆ ಅಸಾಧ್ಯ ಸಿಟ್ಟು ಬಂತು. ನಾನಂತೂ ಹೊರಟಾಗಿದೆ ಇನ್ನು ನಿಧಾನಿಸುವ ಮಾತೇ ಇಲ್ಲ. ಆತ ನನಗೊಂದು ಮಾತು ಹೇಳಿ ಹೋಗುವುದಾದರೂ ಬೇಡವಾ? ಸಂಜೆಯ ಕೊನೇ ಬಸ್ ಆರೂಕಾಲಿಗೆ. ಭಾರವಾಗಿದ್ದ ಬ್ಯಾಗನ್ನೆತ್ತಿಕೊಂಡು ಒಂದೇ ಉಸಿರಿಗೆ ಬಸ್‌ಸ್ಟಾಪಿಗೆ ಓಡಿದೆ. ಬಸ್ ಕಂಡಕ್ಟರ್, ಟೀಸೀ ಬಳಿ ಎಂಟ್ರಿ ಹಾಕಿಸಲು ಹೋಗಿದ್ದರೆ, ಡ್ರೈವರ್ ಟೈರ್ ಮೇಲೆ ನಿಂತುಕೊಂಡು ಕಿಟಕಿಯೊಳಗೆ ತಲೆ ತೂರಿಸಿ ಕಿಕ್ಕಿರಿದು ತುಂಬಿದ್ದ ಜನರನ್ನು ಗದರಿಸಿ, ಜಬರಿಸಿ ಹಿಂದೆ-ಮುಂದೆ ಒತ್ತಿಸಿ, ಕೂರಿಸಿ, ನಿಲ್ಲಿಸಿ ಹೈರಾಣಾಗುತ್ತಿದ್ದ. ವಿಪರೀತ ರಷ್ ಆಗಿದ್ದ ಬಸ್‌ಗೆ ಹತ್ತುವುದು ಹೇಗಪ್ಪಾ ಎಂದು ಯೋಚಿಸುತ್ತಿದ್ದಾಗ ಆ ದಿನ ಶುಕ್ರವಾರವೆಂಬುದು ನೆನಪಿಗೆ ಬಂತು. ಅವತ್ತು ಮೂಡಿಗೆರೆಯ ವಾರದ ಸಂತೆ. ಜನ್ನಾಪುರ, ಬೆಟ್ಟದಮನೆ, ಹುರುಡಿ, ಹಾನುಬಾಳು, ಸಕಲೇಶಪುರದ ಕಡೆಯ ಸಾಕಷ್ಟು ಜನರು ಮೂಡಿಗೆರೆ ಸಂತೆಗೆ ಬಂದವರು ಈ ಕಡೇ ಬಸ್ ಅನ್ನು ಆಶ್ರಯಿಸುತ್ತಾರೆ. ಹಾಗೂ ಹೀಗೂ ಕೈ ಮತ್ತು ತಲೆ ತೂರಿಸಿದರೆ, ಮೈಯನ್ನು ಒಳಗೇ ಬಿಟ್ಟುಕೊಳ್ತಿಲ್ಲ ಬಾಗಿಲಲ್ಲೇ ನಿಂತಿರುವ ಜನ. ಮುದುಗಿಯಾಡಿ ತಲೆ, ಮೈ ತೂರಿಸಿದರೆ ಕೈಯಲ್ಲಿದ್ದ ಮೂಟೆಗಾತ್ರದ ಬ್ಯಾಗ್ ಬಸ್‌ನಿಂದ ಹೊರಗೇ ಇದೆ!!! ಬ್ಯಾಗ್ ಅನ್ನು ಬಿಟ್ಟು ಕೈಯನ್ನು ಒಳಗೆಳೆದುಕೊಳ್ಳುವಂತಿರಲಿಲ್ಲ. ಸ್ವಲ್ಪ ದೂರದ ಗಂಗನಮಕ್ಕಿ ತಲುಪುವಷ್ಟರಲ್ಲಿ ರಸ್ತೆಯ ಗುಂಡಿ ಗೊಟರಿನ ಪ್ರಭಾವದಿಂದ ಆಗುವ ಕುಲುಕಾಟಗಳು, ತಿರುವಿನಲ್ಲಾಗುವ ಒತ್ತುವಿಕೆ, ಗುಂಡಿಯಿಳಿದಾಗ ಆಗುವ ಜಪ್ಪುವಿಕೆಯಿಂದ ಅಂತೂ ಇಂತೂ ನಾನು ಬ್ಯಾಗಿನ ಸಮೇತ ಇಡಿಯಾಗಿ ಬಸ್ ಒಳಸೇರಿದೆ.

ಹಳೇಮೂಡಿಗೆರೆ ರೈಸ್‌ಮಿಲ್ ಬಳಿ ಬರುವಷ್ಟರಲ್ಲಿ ಬಣಕಲ್ ಕಡೆಗೆ ಹೋಗುವ ಮೆಟಾಡೋರೊಂದು ಆ ಏರನ್ನು ಏರಲು ಸಾಧ್ಯವಾಗದೇ ಮುಕ್ಕಿರಿಯುತ್ತಾ ನಿಂತಿತ್ತು. ಎಂಟ್ಹತ್ತು ಜನ ಇಳಿದು ಅದನ್ನು ಹಿಂದಿನಿಂದ ನೂಕುತ್ತಿದ್ದರು. ಆ ಮೆಟಾಡೋರ್ ಮೂಡಿಗೆರೆಗೇ ಅತ್ಯಂತ ಹಳೆಯದು. ಡ್ರೈವರ್ ಕಂ ಮಾಲೀಕ ನುಕ್ಕಣ್ಣ ಇಡೀ ಮೂಡಿಗೆರೆಗೇ ವರ್ಲ್ಡ್ ಫೇಮಸ್ಸು. ಮೂಡಿಗೆರೆ ಬಸ್ ನಿಲ್ದಾಣದಿಂದ ಗಂಗನಮಕ್ಕಿಯವರೆಗೆ ತೀರಾ ಇಳಿಜಾರಿದೆ. ಬಸ್‌ಸ್ಟ್ಯಾಂಡಿನಲ್ಲಿ ಮೆಟಾಡೋರ್ ನಿಲ್ಲಿಸಿಕೊಂಡು ಯಾರ್‍ರೀ ಹೊರಟ್ಟಿ, ಸಬ್ಬೇನಳ್ಳಿ, ಚಕ್ಮಕ್ಕಿ, ಬಣಕಲ್-ಕೊಟ್ಟಿಗೆಹಾರ ಎಂದು ಕೂಗತೊಡಗಿದರೆ ಇಪ್ಪತ್ತು-ಮೂವತ್ತು ನಿಮಿಷದಲ್ಲಿ ಭರ್ತಿಯಾಗುತ್ತಿತ್ತು. ಇಟ್ಟರೋದು ಮೆಟಾಡೋರ್, ತುಂಬಿಸೋದು ಮಾತ್ರ ಕೆ.ಎಸ್.ಆರ್.ಟಿ.ಸಿ. ಬಸ್‌ನಷ್ಟೇ. ಇಲ್ಲಿ ಸ್ಟಾರ್ಟ್ ಮಾಡುವ ಪ್ರಶ್ನೆಯೇ ಇಲ್ಲ. ಕಂಡಕ್ಟರ್ ಗಣೇಶನಿಗೆ ಆಯ್ ಬಡಿಗೆ ತೆಗಿಯೋಟಿ ಎಂದ ಕೂಡಲೇ ಅವನು ಅದಕ್ಕಾಗಿಯೇ ಕಾಯುತ್ತಿದ್ದವನಂತೆ ಹಿಂದಿನ ಟೈರಿಗೆ ಅಡ್ಡ ಕೊಟ್ಟಿದ್ದ ಬಡಿಗೆಯನ್ನು ಕಾಲಿನಿಂದ ಒದ್ದು ಬಾಗಿಲು ಪಕ್ಕದ ಸೀಟಿನಡಿ ತುರುಕುತ್ತಿದ್ದಂತೆ ಮೆಟಾಡೋರ್ ನಿಧಾನವಾಗಿ ಜೀರ್ ಜಿಕ್ ಜೀರ್ ಜಿಕ್ ಎಂದು ಮುಂದುವರೆಯುತ್ತಾ ವೇಗ ಪಡೆದುಕೊಳ್ಳಲಾರಂಭಿಸುತ್ತದೆ. ಗಂಗನಮಕ್ಕಿಯವರೆಗೆ ವೇಗವಾಗಿ ಓಡಿದ ಮೆಟಾಡೋರ್ ಅಷ್ಟರೊಳಗೆ ಜರ್ಕ್‌ನಲ್ಲಿ ಸ್ಟಾರ್ಟ್ ಆದರೆ ಆಯ್ತು, ಇಲ್ಲದಿದ್ದರೆ ಪ್ರಯಾಣಿಕರನ್ನು ದೇವರೇ ಕಾಪಾಡಬೇಕು. ಹಳೇಮೂಡಿಗೆರೆ ಬಳಿ ಏರು ಶುರುವಾಗುವುದರಿಂದ ನುಕ್ಕಣ್ಣ ಬಡಿಗೆ ಕೊಡೋ, ಬಡಿಗೆ ಕೊಡೋ ಎಂದು ಬೊಬ್ಬೆ ಹೊಡೆಯಲಾರಂಭಿಸುತ್ತಾನೆ. ಗಣೇಶ ಬಡಿಗೆ ಕೊಟ್ಟ ಕೂಡಲೇ, ಯುದ್ಧ ಕಾಲದಲ್ಲಿ ಸರ್ಕಾರ ಹೇಳುವಂತೆ ಹೆಂಗಸ್ರು, ಮಕ್ಕಳು, ವಯಸ್ಸಾದವರು ಬಿಟ್ಟು ಉಳಿದವರೆಲ್ಲಾ ಇಳೀರಿ. ಎಲ್ಲಾ ಕೈಕೊಡಿ ಐಸಾ, ತಳ್ಳುನೂಕು ಐಸಾ ಎನ್ನಲು ಪ್ರಾರಂಭಿಸುತ್ತಾನೆ. ಎರಡು ಕಿಲೋಮೀಟರು ಡೌನಿನಲ್ಲಿ ಬಂದುದು ಈಗ ಅರ್ಧ ಕಿಲೋಮೀಟರು ಅಪ್ಪನ್ನು ತಳ್ಳಿ ಹತ್ತಿಸಬೇಕು!! ಅವರ ಕರ್ಮ!! ಶಪಿಸುತ್ತಾ ನೂಕುತ್ತಿದ್ದರು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248